ವಿಷಯ:- ಹಸಿರು ಕಾರ್ಡು ಯೋಜನೆಯಡಿ ಕೊಳಚೆ ಪ್ರದೇಶದ ನಿವಾಸಿಗಳನ್ನು ಸೇರಿಸುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 191 (1809)

ಶ್ರೀ ಸಂಗಣ್ಣ ಕರಡಿ (ಕೊಪ್ಪಳ):- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಹಸಿರು ಕಾರ್ಡು ಯೋಜನೆಯ ಅಡಿ ಕೊಳಚೆ ಪ್ರದೇಶದ ಜನರನ್ನು ಸೇರಿಸಿಕೊಂಡಿದೆಯೇ

ಆ) ಹಾಗಿದ್ದಲ್ಲಿ, ಕೊಪ್ಪಳ ನಗರದ ಹಲವಾರು ಜನರು ಈ ಸೌಲಭ್ಯದಿಂದ ವಂಚಿತರಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಇದನ್ನು ಸರಿಪಡಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಜಿ.ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):-

ಅ) ಹೌದು.

ಆ) ಇಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಸಂಗಣ್ಣ ಕರಡಿ:- ಮಾನ್ಯ ಅಧ್ಯಕ್ಷರೆ, ಹಸಿರು ಕಾರ್ಡು ಯೋಜನೆಯಡಿ ಕೊಳಚೆ ಪ್ರದೇಶದ ಜನರನ್ನು ಸೇರಿಸಿಕೊಳ್ಳಲು ಸರ್ಕಾರ ಪ್ರಯತ್ನ ಮಾಡಿರುವುದರ ಬಗ್ಗೆ ಸರ್ಕಾರ ನಿರ್ಧಾರವನ್ನು ನಾನು ಈ ಸಂದರ್ಭದಲ್ಲಿ ಸ್ವಾಗತಿಸುತ್ತೇನೆ. ಆದರೆ, ಕೊಪ್ಪಳ ನಗರದ ಹಲವಾರು ಜನರು ಈ ಸೌಲಭ್ಯದಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎಂದಿರುವುದಕ್ಕೆ ಇಲ್ಲವೆಂದು ಉತ್ತರಿಸಿದ್ದಾರೆ. ನನ್ನ ಮೂಲಭೂತ ಪ್ರಶ್ನೆಯೇನೆಂದರೆ, ಇವೊತ್ತು ಯಾವ ರೀತಿ ನೀವು ಕೊಳಚೆ ಪ್ರದೇಶದಲ್ಲಿ ವಾಸಿಸುತ್ತಿರುವ ಆರ್ಥಿಕವಾಗಿ ಕೆಳಮಟ್ಟದಲ್ಲಿರುವ ಜನರನ್ನು ಗುರ್ತಿಸಿ ಅವರುಗಳಿಗೆ ಹಸಿರು ಕಾರ್ಡುಗಳನ್ನು ಹಂಚುವ ವ್ಯವಸ್ಥೆ ಮಾಡಿದ್ದೀರೋ, ಅದೇ ರೀತಿ ಇನ್ನೂ ಅನೇಕ ಬಡಾವಣೆಗಳಲ್ಲಿ ಗರಿಷ್ಠ ಸಂಖ್ಯೆಯಲ್ಲಿ ಬದುಕುತ್ತಿರುವ ಜನರಿಗೆ ಹಸಿರು ಕಾರ್ಡಿನ ಸೌಲಭ್ಯವನ್ನು ವಿಸ್ತರಿಸುತ್ತೀರಾ? ಎಂದು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ.

ಶ್ರೀ ಜಿ.ಬಸವಣ್ಣಪ್ಪ ಮಾನ್ಯ ಅಧ್ಯಕ್ಷರೆ, ಪಟ್ಟಣ ಪ್ರದೇಶಗಳಲ್ಲಿ ಅದರಲ್ಲೂ ಘೋಷಿತ ಪ್ರದೇಶಗಳಲ್ಲಿ ಬಡತನ ರೇಖೆಯಿಂದ ಕೆಳಗಿರುವವರನ್ನು ಗುರ್ತಿಸಿ ಅವರುಗಳಿಗೆ ಹಸಿರು ಕಾರ್ಡುಗಳನ್ನು ವಿತರಿಸುವ ಬಗ್ಗೆ ಕೈಗೊಂಡಿರುವ ಕ್ರಮದಂತೆ ಅಘೋಷಿತ ಪ್ರದೇಶದಲ್ಲೂ ಕೂಡ ಹಸಿರು ಕಾರ್ಡುಗಳನ್ನು ವಿತರಿಸುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ.

ಈಗಾಗಲೇ ಅಘೋಷಿತ ಕೊಳಚೆ ಪ್ರದೇಶಗಳಲ್ಲಿ ಬಡತನ ರೇಖೆಯಿಂದ ಕೆಳಗೆ ವಾಸಿಸುತ್ತಿರುವವರಿಗೆ ಒಟ್ಟು 3,032 ಹಸಿರು ಕಾರ್ಡುಗಳನ್ನು ವಿತರಿಸಿದ್ದೇವೆ. ಅಲ್ಲದೆ, ಇತರೆ ಭಾಗಗಳಲ್ಲಿ ಬಡತನ ರೇಖೆಯಿಂದ ಕೆಳಗೆ ವಾಸಿಸುತ್ತಿರುವವರಿಗೂ ಹಸಿರು ಕಾರ್ಡುಗಳನ್ನು ವಿತರಿಸುವ ವ್ಯವಸ್ಥೆಯನ್ನು ವಿಸ್ತರಿಸುವ ಬಗ್ಗೆ ಏನು ಸಲಹೆಯನ್ನು ನಮ್ಮ ಮುಂದಿಟ್ಟಿದ್ದಾರೆ, ಅದನ್ನು ಪರಿಶೀಲಿಸುತ್ತೇನೆ.

ಶ್ರೀ ಸಂಗಣ್ಣ ಕರಡಿ:- ಬಡ ಜನತೆಗೆ ಇದೊಂದು ಒಳ್ಳೆಯ ಯೋಜನೆಯಾಗಿರುವುದರಿಂದ, ಮಾನ್ಯ ಮಂತ್ರಿಗಳು ಮುಖ್ಯಮಂತ್ರಿಗಳ ಜೊತೆ ಈ ಕುರಿತು ಸಮಾಲೋಚಿಸಿ ಆದಷ್ಟು ತೀವ್ರಗತಿಯಲ್ಲಿ ಯೋಜನೆಯನ್ನು ಕಾರ್ಯಗತಗೊಳಿಸಬೇಕೆಂದು ನಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ಬಸವಣ್ಣಪ್ಪ:- ಪರಿಶೀಲಿಸಲಾಗುವುದು.

ವಿಷಯ:- ಶಿಕಾರಿಪುರದಲ್ಲಿ ಪೋಲೀಸ್ ಠಾಣೆ ತೆರೆಯುವ ಪ್ರಸ್ತಾವನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 192 (1291)

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ):- ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಶಿಕಾರಿಪುರದಲ್ಲಿ ಹೊಸದಾಗಿ ಗ್ರಾಮಾಂತರ ಪೋಲೀಸ್ ಠಾಣೆ ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಆ) ಹಾಗಿದ್ದಲ್ಲಿ ಈ ಠಾಣೆಯನ್ನು ಯಾವಾಗ ತೆರೆಯಲಾಗುವುದು?

ಶ್ರೀ ಆರ್.ರೋಷನ್‌ಬೇಗ್ (ಗೃಹ ರಾಜ್ಯ ಸಚಿವರು):-

ಅ) ಇಲ್ಲಾ.

ಆ) ಉದ್ಭವಿಸುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಶಿಕಾರಿಪುರದಲ್ಲಿ ಹೊಸದಾಗಿ ಗ್ರಾಮಾಂತರ ಪೋಲೀಸ್ ಠಾಣೆ ತೆರೆಯುವ ಪ್ರಸ್ತಾಪನೆ ಸರ್ಕಾರ ಮುಂದಿದೆಯೇ? ಎಂದು ಕೇಳಿರುವುದಕ್ಕೆ 'ಇಲ್ಲ'ವೆಂದು ಉತ್ತರಿಸಿದ್ದಾರೆ. ಶಿಕಾರಿಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 26 ಗ್ರಾಮ ಪಂಚಾಯಿತಿಗಳು ಹಾಗೂ 82 ಹಳ್ಳಿಗಳು ಬರಲಿದ್ದು, ಅದರಲ್ಲೂ ಹೋರಾಟಕ್ಕೆ ಹೆಸರುವಾಸಿಯಾದ ಈಸೂರು, ಕಪ್ಪನಹಳ್ಳಿ ಮುಂತಾದ ದೊಡ್ಡ ದೊಡ್ಡ ಗ್ರಾಮಗಳು ಬರುತ್ತವೆ. ಸದರಿ ಠಾಣೆಯ ವ್ಯಾಪ್ತಿ ಐದು ಕಿಲೋಮೀಟರ್‌ನಿಂದ ಇಪ್ಪತ್ತನಾಲ್ಕನೇ ಕಿಲೋಮೀಟರ್‌ವರೆಗೂ ಇದೆ. ಅಲ್ಲದೆ, ಜನಸಂಖ್ಯೆ ದೃಷ್ಟಿಯಿಂದಲೂ ದೊಡ್ಡದಾಗಿದೆ. ಇನ್ನು ಇಲ್ಲಿ ನಡೆದ ಅಪರಾಧಗಳ ಸಂಖ್ಯೆ ಹೇಳುವುದಾದರೆ, 1991ರಲ್ಲಿ 215, 1992ರಲ್ಲಿ 247, 1993ರಲ್ಲಿ 310, 1994ರಲ್ಲಿ 261